ರುಚಿಕರವಾದ ಉಪಹಾರ
ಸಿಹಿ – ಖಾರ ತಿಂಡಿಗಳು
ನ್ಯೂ ಕೋರ್ಟ್ ರೆಸ್ಟೋರೆಂಟ್
ಹೊಸ ಬಸ್‌ಸ್ಟ್ಯಾಂಡ್ ಬಳಿ
ಕುಂದಾಪುರ
ಫೋ : 232878

www.kundaprabha.com e-mail : kundaprabha@gmail.com

ಕುಂದಪ್ರಭ

ವಾರಪತ್ರಿಕೆ

ಸ್ಥಾಪನೆ : 1948
6 ದಶಕಗಳ
ವಿಶ್ವಾಸನೀಯ ಸೇವೆಯಲ್ಲಿ
ಶೇಟ್
ಜ್ಯುವೆಲ್ಲರ್ಸ್
ಶಂಕರ್ ಶೇಟ್ ಬಿಲ್ಡಿಂಗ್
ಮುಖ್ಯರಸ್ತೆ, ಕುಂದಾಪುರ
ಫೋನ್ : 230242

॥ ಸಂಪುಟ : 29 ॥ ಸಂಚಿಕೆ : 05॥ UDP/1263/2018-20 || R.NO.50495/91 ॥ ತಾರೀಕು : 26–02–2019 ॥ ರೂ 5/– ॥ ವಾರ್ಷಿಕ ಚಂದಾ : 300/– ಅಂಚೆಯಲ್ಲಿ : 400/

ಮೋದಿ ಮತ್ತೆ ಪ್ರಧಾನಿ ಹಳ್ಳಿಗಳಲ್ಲಿ ಭರ್ಜರಿ ತಾಲೀಮು

ಮುಂದಿನ ಲೋಕಸಭಾ ಚುನಾವಣೆಯಲ್ಲಿ ಮತ್ತೆ ನರೇಂದ್ರ ಮೋದಿಯವರನ್ನು ಪ್ರಧಾನ ಮಂತ್ರಿಯಾಗಿಸಲು ಬಿಜೆಪಿ, ಮೋದಿ ಅಭಿಮಾನಿಗಳ ಸಂಘ, ಸಂಘ ಪರಿವಾರದ ತಂಡಗಳು ಭರ್ಜರಿ ತಾಲೀಮು ನಡೆಸುತ್ತಿದ್ದು ಈಗಾಗಲೇ ಹಳ್ಳಿ ಹಳ್ಳಿಗಳಲ್ಲಿ ರಥಯಾತ್ರೆ, ಬೈಕ್ , ಬಹಿರಂಗ ಸಮಾವೇಶಗಳ ಮೂಲಕ ಮತದಾರರನ್ನು ಸೆಳೆಯುವ ಪ್ರಯತ್ನ ನಡೆಯುತ್ತಿದೆ.

ಈ ನಡುವೆ ಟೀಮ್ ಮೋದಿ ಹೆಸರಲ್ಲಿ ಅದರ ಸಂಸ್ಥಾಪಕ ಚಕ್ರವರ್ತಿ ಸೂಲಿಬೆಲೆ ರಾಜ್ಯದ ಪ್ರಮುಖ ಪ್ರದೇಶಗಳಲ್ಲೆಲ್ಲ ಬಹಿರಂಗ ಸಮಾವೇಶ ಏರ್ಪಡಿಸಿ, ದೇಶಕ್ಕಾಗಿ ಮೋದಿ ಮೋದಿಗಾಗಿ ನಾವು" ಎಂಬ ಘೋಷಣೆಯೊಂದಿಗೆ ದಿಕ್ಕೂಚಿ ಭಾಷಣ ಮಾಡುತ್ತಿದ್ದಾರೆ.

ಬಿಜೆಪಿ ಅಧಿಕೃತವಾಗಿ ರಂಗತಾಲೀಮು ನಡೆಸುವ ಮುನ್ನವೇ ಯುವ ತಂಡಗಳು ಗ್ರಾಮೀಣ ಪ್ರದೇಶಗಳಲ್ಲಿ ತಮ್ಮದೇ ರೀತಿಯಲ್ಲಿ ಮೋದಿ ಪರ ಪ್ರಚಾರ ಆರಂಭಿಸಿವೆ.

ಪ್ರದಾನ ಸೇವಕ ರಥಯಾತ್ರೆ

ಟೀಂ ಮೋದಿ ರಥಯಾತ್ರೆ ಮೂಲಕ ಕೇಂದ್ರದಲ್ಲಿ ನರೇಂದ್ರ ಮೋದಿ ಸರಕಾರದ ಸಾಧನೆಯನ್ನು ಮನೆ ಮನೆಗೆ ತಲುಪಿಸುವ ಕಾರ್ಯಕ್ರಮ ಕಾರ್ಯಗತಗೊಳಿಸಲಾಗಿದೆ.

ಗ್ರಾಮೀಣ ಪ್ರದೇಶದಲ್ಲೇ ಹೆಚ್ಚು ಸಮಯ ಕಳೆದ ಈ ರಥಯಾತ್ರೆಯನ್ನು ಗೋಳಿಯಂಗಡಿ, ಹಾಲಾಡಿ, ಬಿದ್ಕಲ್‌ಕಟ್ಟೆ ಬಾರಕೂರು, ಬ್ರಹ್ಮಾವರ, ಸಾಲಿಗ್ರಾಮ, ಕೋಟೇಶ್ವರ , ಕುಂದಾಪುರ, ತಲ್ಲೂರು, ಹೆಮ್ಮಾಡಿ, ಮುಳ್ಳಿಕಟ್ಟೆ, ಗುಜ್ಜಾಡಿ, ಮರವಂತೆ, ನಾವುಂದ, ನಾಗೂರು, ಕಂಬದಕೋಣೆ, ನಾಯ್ಕನಕಟ್ಟೆ, ಉಪ್ಪುಂದ, ಬೈಂದೂರು ಪ್ರದೇಶಗಳಿಗೆ ಕೊಂಡೊಯ್ಯಲಾಯಿತು.

ಯುವಕರೇ ಹೆಚ್ಚಿನ ಸಂಖ್ಯೆಯಲ್ಲಿ ಸೇರಿ ಜೈಕಾರ ಹಾಕಿ ಸ್ವಾಗತಿಸಿದರು.

"ದೇಶಕ್ಕಾಗಿ ಮೋದಿಗಾಗಿ ನಾವು" ಎಂಬ ಘೋಷಣೆ ಮೂಲಕ ಮತದಾರರನ್ನು ಸೆಳೆಯಲು ಎಲ್ಲ ವಿಧದ ಪ್ರಯತ್ನ ಮೋದಿ ಅಭಿಮಾನಿಗಳು ಕೈಗೊಂಡಿದ್ದಾರೆ.

ಪಾಕಿಸ್ತಾನವನ್ನು ಮಣಿಸಲು ಮೋದಿಯೇ ಬೇಕು

ಕಾಶ್ಮೀರದಲ್ಲಿ ಅನಾವಶ್ಯಕವಾಗಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣ ಮಾಡಿ ಜನಜೀವನ ಅಸ್ತವ್ಯಸ್ತಗೊಳಿಸುತ್ತಿರುವ ಉಗ್ರರನ್ನು ಬೆಂಬಲಿಸುತ್ತ, ಗಡಿಯಲ್ಲಿ ಅಪ್ರಚೋದಿತರಾಗಿ ಗುಂಡು ಹಾರಾಟ ನಡೆಸುತ್ತ ಕೀಟಲೆ ನೀಡುತ್ತಿರುವ ಪಾಕಿಸ್ತಾನಕ್ಕೆ ಸರಿಯಾದ ಬುದ್ಧಿ ಕಲಿಸಲು ಮೋದಿ ಮತ್ತೆ ಪ್ರಧಾನಿಯಾಗಿ ಬರಬೇಕಾದುದು ಅವಶ್ಯವಾಗಿದೆ ಎಂಬ ಭಾವನೆಯನ್ನು ಯುವ ಜನರಲ್ಲಿ ಮೂಡಿಸಲು ಪ್ರಯತ್ನಿಸಲಾಗುತ್ತಿದೆ.

ಉಗ್ರನಿಂದ 44 ಸೈನಿಕರು ಹುತಾತ್ಮರಾದ ನಂತರ ಪಾಕ್ ವಿರೋಧಿ ಭಾವನೆ ಹೆಚ್ಚುತ್ತಿದ್ದು ದೇಶಕ್ಕಾಗಿ ಎಲ್ಲರೂ ಒಂದಾಗಬೇಕು ಎಂಬ ಭಾವನೆ ರೂಪಿಸಲಾಗುತ್ತಿದೆ.

ದೇಶಭಕ್ತಿ ಉಕ್ಕಿಸುವ ಭಾಷಣವನ್ನು ನೀಡುತ್ತಾ ಬಂದಿರುವ ಖ್ಯಾತ ವಾಗ್ಮಿ ಚಕ್ರವರ್ತಿ ಸೂಲಿಬಲೆ ಈಗ ಟೀಂ ಮೋದಿ ಮೂಲಕ ಮತ್ತೆ ಮೋದಿ ಪ್ರಧಾನಿಯಾಗಬೇಕೆಂಬ ಅಭಿಯಾನ ಆರಂಭಿಸಿದ್ದಾರೆ. ಟೀಂ ಮೋದಿಯ ರಥಯಾತ್ರೆ ಗ್ರಾಮೀಣ ಪ್ರದೇಶದಲ್ಲಿ ಪ್ರವೇಶ ಮಾಡಿದಾಗ ಭರ್ಜರಿ ಸ್ವಾಗತ ನೀಡಿದ ಯುವಕರು.

ಎಂ.ಪಿ. ಶೋಭಾ ಕರಂದ್ಲಾಜೆಯಿಂದ ವಿವಿಧ ಯೋಜನೆಗಳ ಉದ್ಘಾಟನೆ

ಲೋಕಸಭಾ ಸದಸ್ಯರಾದ ಶೋಭಾ ಕರಂದ್ಲಾಜೆ ಕುಂದಾಪುರ ವಿಧಾನಸಭಾ ಕ್ಷೇತ್ರದ ಹಲವು ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ವಿವಿಧ ಯೋಜನೆಗಳನ್ನು ಉದ್ಘಾಟಿಸಿದರು.

ದಿನಾಂಕ 20 ರಂದು ಕೋಟೇಶ್ವರ ಸರಕಾರಿ ಪ.ಪೂ.ಕಾಲೇಜನಲ್ಲಿ ಹಾಗೂ ಕುಂದಾಪುರ ಸರಕಾರಿ ಪ.ಪೂ.ಕಾಲೇಜಿನಲ್ಲಿ ಕೇಂದ್ರ ಸರಕಾರದ ಮಹತ್ವಾಕಾಂಕ್ಷೆ ಯೋಜನೆಯಾದ ಅಟಲ್ ಟಿಂಕೇರಿಂಗ್ ಲ್ಯಾಬ್ ಉದ್ಘಾಟಿಸಿದರು. ಶಾಸಕ ಹಾಲಾಡಿ ಶ್ರೀನಿವಾಸ ಶೆಟ್ಟಿಯವರು ಪಾಲ್ಗೊಂಡರು.

ಕಾಡೂರು–ನಡೂರು ಗ್ರಾಮ ಪಂಚಾಯತ್ ಸಂಪೂರ್ಣ ನಗದು ರಹಿತ ಪಂಚಾಯತ್ ಆಗಿದ್ದು ಡಿಜಿಟಲ್ ಪೇಮೆಂಟ್ "ಯುವ ಪೆ" ಉದ್ಘಾಟನೆ ಮಾಡಿದರು.

ಶ್ರೀವಾಣಿ ಪ್ರೌಢಶಾಲೆ ರಜತಾದ್ರಿಯಲ್ಲಿ ನಡೆದ ಸಮಾರಂಭದಲ್ಲಿ ಬಿಜೆಪಿ ಕ್ಷೇತ್ರ ಅಧ್ಯಕ್ಷ ಕಾಡೂರು ಸುರೇಶ್ ಶೆಟ್ಟಿ, ತಾ.ಪ. ಸದಸ್ಯ ಬೋಜಶೆಟ್ಟಿ ಉಪಸ್ಥಿತರಿದ್ದರು.